1	2	3	4
	2) ಭಾಗಶಃ ಹಾನಿ: ಪಕ್ಕಾ ಮನೆ–165 ಕಚ್ಚಾ ಮನೆ–38 3) ಆಂಶಿಕ ಹಾನಿ –61 ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ತಿ ಹಾನಿಯ ಅಂದಾಜು ತಯಾರಿಸಲಾಗುತ್ತಿದೆ.	 3.27 0.43 0.48	ದಕ್ಷಿಣ ಕನ್ನಡ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ.60.00 ಲಕ್ಷ ಅನುದಾನ ಬಿಡುಗಡೆ ಮಾಡಿದೆ.
ಉತ್ತರ ಕನ್ನಡ ಜಿಲ್ಲೆ	ಜೀವ ಹಾನಿ–3 ಮನೆಗಳ ಹಾನಿ ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ 2006–07ನೇ ಸಾಲಿನಲ್ಲಿ ಆಗಿರುವ ಒಟ್ಟು ಹಾನಿ 629.70 ಲಕ್ಷ	1.5 7.036	ಉತ್ತರ ಕನ್ನಡ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ. 30.00 ಲಕ್ಷ ಅನುದಾನ ಬಿಡುಗಡೆ ಮಾಡಿದೆ.
ಉಡುಪಿ ಜಿಲ್ಲೆ	ಜೀವ ಹಾನಿ–7 ತೋಟಗಾರಿಕೆ ಬೆಳೆ ಹಾನಿ –5 ಹಚ್ ಮನೆಗಳ ಹಾನಿ: 1) ಪೂರ್ಣ ಹಾನಿ–15 2) ಭಾಗಶಃ ಹಾನಿ–49	6.50 0.031 0.295 0.679	ಉಡುಪಿ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ. 60.00 ಲಕ್ಷ ಅನುದಾನ ಬಿಡುಗಡೆ ಮಾಡಿದೆ.

401 (645) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಸಕ್ರಮ ಮಂಜೂರಾತಿಯಲ್ಲಿ ಕೆಲವು ಪ್ರದೇಶಗಳು ನಗರ ಸಭೆಗೆ ಸೇರಿಸಿದ ನಂತರ 5 ಕಿ.ಮೀ. ಒಳಗೆ ಬರುವ ಸಾಗುವಳಿಯನ್ನು ಸಕ್ರಮ ಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಪ್ರಸ್ತುತ ಸರ್ಕಾರವು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 108 (ಐ)ಗೆ ಮಾಡಿರುವ ತಿದ್ದುಪಡಿಯಂತೆ ನಗರ ಅಥವಾ ಪಟ್ಟಣ ಪರಿಮಿತಿಗೊಳಗಿರುವ ಯಾವುದೇ ಸರ್ಕಾರಿ ಭೂಮಿಯನ್ನು ಯಾರೇ ವ್ಯಕ್ತಿಗೆ ಅಥವಾ ಒಂದು ಖಾಸಗಿ ಸಂಸ್ಥೆಗೆ ಮಂಜೂರು

ಮಾಡತಕ್ಕದ್ದಲ್ಲ. ಅಂಥ ಎಲ್ಲ ಭೂಮಿಗಳನ್ನು ಬೆಳೆಯುತ್ತಿರುವ ನಗರ ಅಥವಾ ಪಟ್ಟಣಗಳ ಸಾರ್ವಜನಿಕ ಅಗತ್ಯತೆಗಳಿಗೆ ಒದಗಿಸಲು ಸಾರ್ವಜನಿಕ ಅಥವಾ ಸರ್ಕಾರಿ ಉದ್ದೇಶಗಳಿಗಾಗಿ ಮೀಸಲಿಡತಕ್ಕದ್ದು ಎಂದು ತಿಳಿಸಲಾಗಿದೆ. ಆದ್ದರಿಂದ ಈ ಪಟ್ಟಣ/ನಗರ ಮಿತಿಯಲ್ಲಿನ ಜಮೀನುಗಳು ಮಂಜೂರಾತಿಸಲು ಅವಕಾಶವಿಲ್ಲದಿರುವುದರಿಂದ, ಇಂಥಹ ಜಮೀನುಗಳನ್ನು ಸ್ಕ್ರಮಗೊಳಿಸುವ ಉದ್ದೇಶ ಸರ್ಕಾರದ ಮುಂದಿರುವುದಿಲ್ಲ.

402 (646) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕಛೇರಿ ಭೂಮಿ/ಕಿಯಾಸ್ಕ್ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಈವರೆಗೂ ಸರ್ಕಾರವು ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಇಲ್ಲ.

ಆ) ಭೂಮಿ ಕೇಂದ್ರವು ನಿರ್ದಿಷ್ಟ ಸಿಬ್ಬಂಧಿ ವಿನ್ಯಾಸ ಹೊಂದಿರುವುದಿಲ್ಲ. ಭೂಮಿ ಕೆಲಸ ಕಾರ್ಯಗಳಿಗೆ ಸಿಬ್ಬಂದಿಯ ಕೊರತೆ ಕಂಡುಬಂದಿರುವುದಿಲ್ಲ. ಹೆಚ್ಚುವರಿ ಸಿಬ್ಬಂದಿಯ ಅವಶ್ಯಕತೆ ಕಂಡುಬಂದಲ್ಲಿ, ತಾಲ್ಲೂಕು/ಜಿಲ್ಲಾ ಆಡಳಿತವು ಭೂಮಿ ಕೇಂದ್ರಗಳಿಗೆ ನಿಯೋಜಿಸಲು ಸಿಬ್ಬಂದಿಯನ್ನು ಗುರುತಿಸಿದಲ್ಲಿ, ಈ ಸಿಬ್ಬಂದಿಗೆ ರಾಜ್ಯ ಮಟ್ಟದಲ್ಲಿ ಕಂದಾಯ ಇಲಾಖೆಯು ತರಬೇತಿ ನೀಡುತ್ತದೆ.

403 (649) ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಅರಣ್ಯ ಭೂಮಿಯಲ್ಲಿ ಅಕ್ರಮ ಗಣಿ ಕೈಗಾರಿಕೆ ತಡೆಗಟ್ಟಲು ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು :

ಆ) ಅಕ್ರಮ ಗಣಿಗಾರಿಕೆಯ ಪ್ರಕರಣಗಳ ವಿವರ ನೀಡುವುದು;

ಇ) ಅಕ್ರಮ ಗಣಿಗಾರಿಕೆದಾರರ ವಿಳಾಸ ಮತ್ತು ಅವರುಗಳಿಂದ ವಸೂಲಿ ಮಾಡಲಾದ ದಂಡದ ಮೊತ್ತವೆಷ್ಟು? (ಕಳೆದ ಮೂರು ವರ್ಷಗಳ ವರ್ಷವಾರು ವಿವರ ನೀಡುವುದು)

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ತುಮಕೂರು ಜಿಲ್ಲೆಯ ಅರಣ್ಯ ಭೂಮಿಯಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಗಣಿ ಮಾಲೀಕರ ಸಮಕ್ಷಮ ಜಂಟಿ ಸರ್ವೆ ನಡೆಸಿದ್ದು ಈ ಜಂಟಿ ಸರ್ವೆಯ ನಂತರ ಅರಣ್ಯ ಇಲಾಖಾ ಸಿಬ್ಬಂದಿಯವರು ಕಾಂಕ್ರೀಟ್ ಕಂಬಗಳನ್ನು ನೆಟ್ಟಿ ಅರಣ್ಯ ಗಡಿಯನ್ನು ಗುರುತಿಸಿಕೊಂಡು